# ಅಪೊಸ್ತಲರು

◆ **ಪೇತ್ರ** -- ಇತನು ಸಿಮೋನ ಎಂದು ಸಹ ಪರಿಚಿತನಿದ್ದನು. ಆತನ ಹೆಸರು ಕೇಫ ಎಂದು ಬದಲಾಯಿಸಲ್ಪಟ್ಟಿತು, ಅದರರ್ಥವು “ಬಂಡೆ” ಎಂಬದು. ಆತನು ತನ್ನ ಸುವಾರ್ತಾಸೇವೆಯನ್ನು ಯೆಹೂದ್ಯರು ಮಧ್ಯದಲ್ಲಿ ಮಾಡಿದನು ಮತ್ತು 1 ಹಾಗೂ 2 ಪೇತ್ರ ಪತ್ರಿಕೆಗಳನ್ನು ಬರೆದನು. ಅಲ್ಲದೆ ಆತನು ಮಾರ್ಕನ ಸುವಾರ್ತೆಯನ್ನು ಬರೆಯುವದರಲ್ಲಿ ಸಹ ಸಹಾಯವನ್ನು ಮಾಡಿರಬಹುದಾಗಿದೆ.

◆ **ಅಂದ್ರೇಯ** -- ಇತನು ಪೇತ್ರನ ಸಹೋದರನಾಗಿದ್ದನು ಮತ್ತು ಯೇಸುವನ್ನು ಪೇತ್ರನಿಗೆ ಪರಿಚಯಿಸಿದನು (ಯೋಹಾನ1:40-42). ಈ ಅಣ್ಣತಮ್ಮಂದಿರು ಬೇತ್ಸಾಯಿದಾಕ್ಕೆ ಸೇರಿದ ಮೀನುಗಾರರಾಗಿದ್ದರು.

◆ **ಯಾಕೋಬ** – ಇತನು ಯೋಹಾನನ ಸಹೋದರನಾಗಿದ್ದನು. ಇಬ್ಬರೂ ಜೇಬದಾಯನ ಮತ್ತು ಸಲೋಮೆಯ ಮಕ್ಕಳಾಗಿದ್ದರು ಹಾಗೂ ಬೇತ್ಸಾಯಿದಾದಲ್ಲಿ ತಮ್ಮ ತಂದೆಯ ಜೊತೆಯಲ್ಲಿ ಕೆಲಸ ಮಾಡುತ್ತಿದ್ದರು. ಕೆಲವು ಸಾರಿ “ದೊಡ್ಡವನು” ಎಂದು ಕರೆಯಲ್ಪಡುವ ಯಾಕೋಬನು ಯೆರೂಸಲೇಮಿನಲ್ಲಿ ಹಾಗೂ ಯೂದಾಯದಲ್ಲಿ ಬೋಧಿಸುತ್ತಿದ್ದನು. ಆತನು ಕ್ರಿ.ಶ 44 ರಲ್ಲಿ ಹೆರೋದನಿಂದ ಶೀರಚ್ಛೇಧ ಮಾಡಿಸಲ್ಪಟ್ಟನು, ಹೀಗೆ ಪ್ರಥಮ ಅಪೊಸ್ತಲ ರಕ್ತಸಾಕ್ಷಿಯಾದನು.

◆ **ಯೋಹಾನ** – ಇವನು ಯಾಕೋಬನ ಸಹೋದರನು. ಇಬ್ಬರೂ ತಮ್ಮ ತಂದೆಯ ಜೊತೆಯಲ್ಲಿ ಬೆಸ್ತರಾಗಿದ್ದರು (ಮಾರ್ಕ 1:19,20). ಯೇಸು ಈ ಇಬ್ಬರೂ ಸಹೋದರರನ್ನು “ಸಿಡಿಲು ಮರಿಗಳು” ಎಂದು ಕರೆದನು (ಮಾರ್ಕ 3:17). ಯೋಹಾನನು ಆಸ್ಯಸೀಮೆಯ ಸಭೆಗಳಲ್ಲಿ, ವಿಶೇಷವಾಗಿ ಎಫೆಸದಲ್ಲಿ ಶ್ರಮವಹಿಸಿ ಸೇವೆಮಾಡಿದನು. ಕ್ರಿ.ಶ 95 ರಲ್ಲಿ, ಆತನನ್ನು ಪತ್ಮೋಸ ದ್ವೀಪಕ್ಕೆ ಗಡೀಪಾರು ಮಾಡಲಾಯಿತು, ಅಲ್ಲಿಯೇ ಆತನು ಪ್ರಕಟಣೆ ಪುಸ್ತಕವನ್ನು ಬರೆದಿಟ್ಟನು. ಆತನ ಬರಹಗಳಲ್ಲಿ ಯೋಹಾನನ ಸುವಾರ್ತೆ ಹಾಗೂ 1, 2, ಮತ್ತು 3 ಯೋಹಾನ ಪತ್ರಿಕೆಗಳು ಸೇರಿವೆ.

◆ **ಫಿಲಿಪ್ಪ** – ಇತನು ಬೇತ್ಸಾಯಿದಾ ಊರಿನವನು. ನತಾನಿಯೇಲನಿಗೆ ಯೇಸುವಿನ ಬಗ್ಗೆ ಇತನೇ ಹೇಳಿದನು (ಯೋಹಾನ 1:44-46).

◆ **ಬಾರ್ತಲೋಮಾಯ** – ಬಹುಶಃ ಇತನು ಯೋಹಾನನ ಸುವಾರ್ತೆಯಲ್ಲಿ ಕಾಣಿಸುವ ನತಾನಿಯೇಲನೇ ಆಗಿರಬಹುದಾಗಿದೆ (ಯೋಹಾನ 1:44-46). ಇತನು ಗಲಿಲಾಯದ ಕಾನಾ ಊರಿನವನಾಗಿದ್ದನು.

◆ **ತೋಮನು** – ಇವನನ್ನು ದೀದಮನೆಂದು (“ಅವಳಿ”) ಸಹ ಕರೆಯಲಾಗುತ್ತಿತ್ತು (ಯೋಹಾನ 11:16; 20:24; 21:2).ಆತನ ಸ್ವಂತ ಊರು ಗಲಿಲಾಯ. ಆತನು ಸಿರಿಯಾದಲ್ಲಿನ ಸಭೆಯ ಸ್ಥಾಪಕನೆಂದು ಆ ದೇಶದವರಿಂದ ನಂಬಲ್ಪಡುತ್ತದೆ; ಆತನು ಪರ್ಸಿಯಾ ಹಾಗೂ ಭಾರತದಲ್ಲಿ ಸಹ ಸಭೆಗಳನ್ನು ಸ್ಥಾಪಿಸಿರುವ ಸಾಧ್ಯತೆಯಿದೆ.

◆ **ಮತ್ತಾಯ** – ಇತನು ಅಲ್ಫಾಯನ ಮಗನಾದ ಲೇವಿ ಎಂದು ಸಹ ಪರಿಚಿತನಿದ್ದನು (ಮತ್ತಾಯ 9:9; ಮಾರ್ಕ2:14).ಇವನು ಕೆಪೆರ್ನೌಮ ಊರಿನವನು ಮತ್ತು ರೋಮಾಯ ಸರ್ಕಾರದಲ್ಲಿ ಸುಂಕವಸೂಲಿಗಾರನಾಗಿ ಕೆಲಸಮಾಡುತ್ತಿದ್ದನು.

◆ **ಯಾಕೋಬ** – ಕೆಲವು ಸಾರಿ “ಸಣ್ಣವನು” ಎಂದು ಕರೆಯಲ್ಪಡುವ ಈ ಯಾಕೋಬನು ಅಲ್ಫಾಯ ಮತ್ತು ಮರಿಯಳ ಮಗನಾಗಿದ್ದನು (ಮತ್ತಾಯ 10:3; 27:56). (ಯಾಕೋಬ ಮತ್ತು ಮತ್ತಾಯ ಇಬ್ಬರೂ ಸಹೋದರರಾಗಿದ್ದೀರಬಹುದಾ? ನಮಗೆ ತಿಳಿಯದು.) ಇವನು ಗಲಿಲಾಯ ಊರಿನವನು ಮತ್ತು ಯಾಕೋಬನ ಪುಸ್ತಕದ ಬರಹಗಾರನು.

◆ **ತದ್ದಾಯ** – ಯಾಕೋಬನ ಮಕ್ಕಳಲ್ಲೊಬ್ಬನು, ಇತನು ಯೂದ ಅಥವಾ ಯೂದಾಯ ಎಂದು ಕರೆಯಲ್ಪಡುತ್ತಿದ್ದನು (ಮತ್ತಾಯ 10:3;ಲೂಕ6:16). ಇವನು ಸಹ ಗಲಿಲಾಯ ಊರಿನವನಾಗಿದ್ದನು.

◆ **ಮತಾಭಿಮಾನಿ ಸಿಮೋನ** – ಇತನು ಕಾನಾನ್ಯನೆಂದು ಸಹ ಪರಿಚಿತನಾಗಿದ್ದನು, ಅದು "ಮತಾಭಿಮಾನಿ" ಎಂಬದಕ್ಕೆ ಇನ್ನೊಂದು ಪದವಾಗಿದೆ, ಅರ್ಮೆನಿಯ ಭಾಷೆಯಿಂದ ಅನುವಾದಿಸಲ್ಪಟ್ಟದ್ದಾಗಿದೆ. ಸಿಮೋನನು ಗಲಿಲಾಯಕ್ಕೆ ಸೇರಿದ್ದನು.

◆ **ಇಸ್ಕರಿಯೋತ ಯೂದನು** – "ಇಸ್ಕರಿಯೋತ" ಎಂಬುದು ಬಹುಶಃ ಆತನು ಯೂದಾಯದ ಕೆರಿಯೋತ್ ಎಂಬ ಊರಿನವನೆಂಬದನ್ನು ಸೂಚಿಸಬಹುದಾಗಿದೆ. ಇವನು ಯೇಸುವನ್ನು ದ್ರೋಹದಿಂದ ಹಿಡಿದುಕೊಟ್ಟು ನಂತರ ಆತ್ಮಹತ್ಯೆ ಮಾಡಿಕೊಂಡನು.

◆ **ಮತ್ತೀಯನು** – ಇಸ್ಕರಿಯೋತ ಯೂದನ ಮರಣದ ಬಳಿಕ, ಮತ್ತೀಯನು ಯೂದನ ಸ್ಥಾನಕ್ಕೆ ಆರಿಸಿಕೊಳ್ಳಲ್ಪಟ್ಟನು (ಅಪೊಸ್ತಲರ ಕೃತ್ಯ 1:26). ನಾವು ಅಪೊಸ್ತಲರ ಕೃತ್ಯ 1:22 ರಿಂದ ತಿಳಿಯುವದೇನೆಂದರೆ ಯೇಸು "ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಹೊಂದಿ ಮೇಲಕ್ಕೆ ಒಯ್ಯಲ್ಪಡುವ ತನಕ" ಯೇಸು ಮತ್ತು ಆತನ ಶಿಷ್ಯರ ಸಂಗಡ ಮತ್ತೀಯನು ಇದ್ದನು ಎಂಬದು.

◆ **ಪೌಲನು** – ಮೊದಲು ಸೌಲನಾಗಿದ್ದು ನಂತರ ಪೌಲನಾದ ಇತನು ಸಭೆಯ ಹಿಂಸಕನಾಗಿದ್ದನು, ನಂತರ ಅನ್ಯಜನರಿಗೆ ಒಬ್ಬ ವಿಶೇಷ ಅಪೊಸ್ತಲನಾಗಿರುವದಕ್ಕೆ ಕರೆಯಲ್ಪಟ್ಟನು (ರೋಮಾ 11:13; 1ಕೊರಿಂಥ 1:1; 9:1;15:9; 2ಕೊರಿಂಥ 12:12; ಗಲಾತ್ಯ 1:1; 1ತಿಮೊಥೆ 2:7). ಯೇಸು ಆತನಿಗೆ ದಮಸ್ಕದ ಮಾರ್ಗದಲ್ಲಿ ಪ್ರತ್ಯಕ್ಷನಾದನು. ಆತನು ಹೊಸ ಒಡಂಬಡಿಕೆಯ ಬಹಳಷ್ಟು ಭಾಗವನ್ನು ಬರೆದನು.

---

ಅಪೊಸ್ತಲರು ಕರ್ತನಿಂದ ನೇಮಿಸಲ್ಪಟ್ಟ ಆತನ ವಿಶೇಷ ಸಂದೇಶಕರಾಗಿದ್ದರು, ಅವರು ಆತನ ಜೀವನ ಮತ್ತು ಪುನರುತ್ಥಾನಗಳ ಕುರಿತು ವೈಯಕ್ತಿಕ ಸಾಕ್ಷಿಗಳನ್ನು ಕೊಡಬಲ್ಲವರಾಗಿದ್ದರು. ಇಸ್ಕರಿಯೋತ ಯೂದನ ಸ್ಥಾನದಲ್ಲಿ ಬೋರೊಬ್ಬರನ್ನು ನೇಮಿಸುವಾಗ, ಹೊಸದಾಗಿ ನೇಮಕವಾಗುವವನು ಯೇಸುವಿನ ಭೂಮಿಯ ಮೇಲಿನ ಸೇವೆಯುದ್ದಕ್ಕೂ ಆತನನ್ನೂ ಆತನ ಶಿಷ್ಯರನ್ನೂ ಬಲ್ಲವನಾಗಿರಬೇಕಾಗಿತ್ತು (ಅಪೊಸ್ತಲರ ಕೃತ್ಯ1:21). ನಂತರದಲ್ಲಿ, ಯೇಸು ಪೌಲನಿಗೆ ಕಾಣಿಸಿಕೊಂಡು ಆತನನ್ನು ಅನ್ಯಜನರಿಗೆ ಅಪೊಸ್ತಲನಾಗುವ ಹಾಗೆ ಅರ್ಹಗೊಳಿಸಿದನು (1ಕೊರಿಂಥ15:8). ಇಲ್ಲಿ ಪಟ್ಟಿ ಮಾಡಲಾಗಿರುವ ಕೆಲವು ಮಾಹಿತಿಗಳು ಆಯ್ದುಕೊಳ್ಳಲ್ಪಟ್ಟದ್ದು: ಪ್ರ್ಯಾಂಕ್.ಎಲ್. ಕಾಕ್ಸ್ ರ "ದಿ ಗ್ಲೋರಿಯಸ್ ಕಂಪನಿ ಆಪ್ ದಿ ಅಪೊಸ್ಟಲ್ಸ್", ದಿ ಮಿನಿಸ್ಟರ್ಸ್ ಮಂತ್ಲೀ (ಪೆಬ್ರುವರಿ 1960): 254.